# ಗದ್ಯ ಭಾಗ

# 1. ಬುದ್ಧನ ಸಲಹೆ

– ನಿರುಪಮಾ

ಲೇಖಕರ ಪರಿಚಯ :

ಲೇಖಕಿ : ಡಾ॥ ನಿರುಪಮಾ

ಜನನ : 1933

ಸ್ಥಳ : ತುಮಕೂರು ಜಿಲ್ಲೆಯ ಹೊಳವನಹಳ್ಳಿ

ಕೃತಿಗಳು : ಅಮೃತ ಕಲಶ, ಪರಿತ್ಯಕ್ತೆ, ಭುವನ ವಿಜಯ ಇವು ಕಾದಂಬರಿಗಳು ರಣಹದ್ದು, ಅಧಿಕಾರಿಗಳ ಅವಾಂತ್ರ (ನಾಟಕಗಳು) ಮಕ್ಕಳ ಸಾಹಿತ್ಯ 25 ಎಂಬ ಕೃತಿಗಳನ್ನು ರಚಿಸಿದ್ದಾರೆ.

ಪ್ರಶಸ್ತಿಗಳು : ಯೂನಿಸೆಫ್ ಮಕ್ಕಳ ಸಾಹಿತ್ಯ ಪ್ರಶಸ್ತಿ, ಶಾಶ್ವತಿ ಸದೋದಿತಾ ಪ್ರಶಸ್ತಿ ಆರ್ಯಭಟ, ಅನುಪಮಾ, ಸಾಹಿತ್ಯ ಶಿರೋಮಣಿ, ಅತ್ತಿಮಬ್ಬೆ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ವಿಶೇಷತೆ : ವಿವಿಧ ಭಾಷೆಗಳ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಆಕರ : ಶತಮಾನದ ಮಕ್ಕಳ ಸಾಹಿತ್ಯ

ನೆಮ್ಮದಿ – ಸಂತೃಪ್ತಿ

ವಿಭಾಗಿಸು – ಸಂಭಾಗ; [illegible] ತಿರುಗು

ಸುಭಿಕ್ಷ – ಒಳ್ಳೆಯ ಕಾಲ; ಸಮೃದ್ಧಿ

**II. ಪ್ರಶ್ನೆಗಳು :**

**(ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿರಿ.**

1. ಸಿದ್ಧಾರ್ಥನ ತಂದೆಯ ಹೆಸರು ..................
2. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಹರಿಯುವ ನದಿ ..................
3. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಶಾಂತಿ ನೆಲೆಸುವಂತೆ ಮಾಡಿದವರು ..................
4. 'ಬುದ್ಧನ ಸಲಹೆ' ಪಾಠದ ಆಕರ ಕೃತಿ ..................

**ಉತ್ತರಗಳು :** 1. ಶುದ್ಧೋಧನ 2. ಗಂಗಾನದಿ 3. ಬುದ್ಧ ಭಗವಾನ್ 4. ಶತಮಾನದ ಮಕ್ಕಳ ಸಾಹಿತ್ಯ

**(ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಗಂಗಾನದಿ ಎಲ್ಲಿ ಹುಟ್ಟಿ ಯಾವ ಸಮುದ್ರವನ್ನು ಸೇರುತ್ತದೆ?**

ಉ. ಗಂಗಾನದಿ ಹೇಮಕೂಟ ಪರ್ವತದಲ್ಲಿ ಹುಟ್ಟಿ ಬಂಗಾಳ ಸಮುದ್ರವನ್ನು ಸೇರುತ್ತದೆ.

**2. ಬುದ್ಧನ ಪ್ರಕಾರ ನದಿ ನೀರಿಗಿಂತ ಬೆಲೆಯುಳ್ಳದ್ದು ಯಾವುದು? ಏಕೆ?**

ಉ. ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು. ಏಕೆಂದರೆ ರಕ್ತ ಅಮೂಲ್ಯ ನೀರು ಅದಕ್ಕಿಂತ ಕಡಿಮೆ ಬೆಲೆಯುಳ್ಳದ್ದು.

**3. ಬುದ್ಧ ದೇವನು ಹೇಳುವಂತೆ ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಏನು ಮಾಡಬೇಕು?**

ಉ. ಪ್ರಕೃತಿ ಜೀವಿಗಳಿಗೆ ವರ, ಆ ವರವನ್ನು ಸರ್ವಮಾನವರೂ, ಸಮಾನವಾಗಿ ಹಂಚಿಕೊಂಡರೆ ಸುಖ ಶಾಂತಿ ಸಿಗುತ್ತದೆ.

**4. ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ಏಕೆ ನಿಲ್ಲಿಸಿದರು?**

ಉ. ಬುದ್ಧದೇವ ಬೋಧಿಸಿದ ಸಲಹೆ ಎರಡೂ ರಾಜ್ಯದ ರಾಜರಿಗೆ ಸತ್ಯವೆನ್ನಿಸಿತು. ಆದುದರಿಂದ ಅವರು ಯುದ್ಧವನ್ನು ನಿಲ್ಲಿಸಿದರು.

**(ಇ) ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ವತ್ಸ ಮತ್ತು ಮಗಧ ರಾಜ್ಯದ ಜನರು ಗಂಗಾನದಿಯನ್ನು ತಾಯಿಯಂತೆ ಏಕೆ ಪೂಜಿಸುತ್ತಿದ್ದರು?**

ಉ. ಗಂಗಾನದಿಯಿಂದ ಎರಡೂ ರಾಜ್ಯಗಳು ಉಪಯೋಗ ಪಡೆದು ಸುಭಿಕ್ಷವಾಗಿದ್ದವು. ಆ ನದಿಯ ನೀರಿನಿಂದ ಎರಡೂ ರಾಜ್ಯಗಳ ನೆಲ ಸಸ್ಯಶ್ಯಾಮಲವಾಗಿತ್ತು.

ಎತ್ತನೋಡಿದರೂ ಹಸಿರು ತುಂಬಿ ಬೆಳೆಬೆಳೆದು ಸುಭಿಕ್ಷದಿಂದ ಜನರು ಸುಖವಾಗಿದ್ದರು. ತಮಗೆ ಅನ್ನ ನೀಡುವ ತಾಯಿ ಎನ್ನುತ್ತಿದ್ದರು. ಆ ನದಿಯನ್ನು ತಾಯಿಯಂತೆ ಪೂಜಿಸುತ್ತಿದ್ದರು.

**2. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ದ್ವೇಷ ಏಕೆ ಹೆಚ್ಚಾಯಿತು?**

ಉ. ವತ್ಸ ಮತ್ತು ಮಗಧ ರಾಜ್ಯಗಳ ರಾಜರಿಗೆ ಗಂಗಾ ನದಿಯ ಮೇಲೆ ತಮ್ಮ ಸಂಪೂರ್ಣ ಅಧಿಕಾರ ಸ್ಥಾಪಿಸಬೇಕೆಂಬ ದುರಾಸೆ ಉಂಟಾಯಿತು. ಅವರಿಬ್ಬರನ್ನೂ ಕ್ರಮೇಣ ಸ್ವಾರ್ಥ ಆವರಿಸಿತು. ದಿನ ಕಳೆದಂತೆ ಈ ಸ್ವಾರ್ಥ ಹೆಮ್ಮರವಾಗಿ ಬೆಳೆದು ದ್ವೇಷ ಹೆಚ್ಚಾಯಿತು. ಎರಡೂ ರಾಜ್ಯಗಳವರು ಯುದ್ಧಕ್ಕೆ ಸಿದ್ಧವಾಗುವ ಪರಿಸ್ಥಿತಿ ಉಂಟಾಯಿತು.

**3. ಬುದ್ಧನು ಹೇಳುವಂತೆ ದ್ವೇಷ ದುಃಖವನ್ನು ಹೇಗೆ ಹೆಚ್ಚಿಸುತ್ತದೆ?**

ಉ. ಬುದ್ಧ ದೇವನು ಹೇಳುವಂತೆ ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ಉಳಿಯುವುದು ಈರ್ಷ್ಯೆಯೇ. ಇವುಗಳಿಂದ ಜೀವಿಗಳಿಗೆ ದುಃಖವೇ ಹೊರತು ಸುಖವಲ್ಲ. ದ್ವೇಷವೆಂದರೆ ಸುಖವಾಗಿರುವ ಜನರು ದುಃಖ ತಂದುಕೊಳ್ಳುವ ಮಾರ್ಗವಾಗಿದೆ.

**4. ವತ್ಸ ಮತ್ತು ಮಗಧ ರಾಜ್ಯದವರಿಗೆ ಸುಖಶಾಂತಿಯ ಮಹತ್ವವನ್ನು ಬುದ್ಧನು ಹೇಗೆ ಬೋಧಿಸಿದನು?**

ಉ. "ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರ ಎಲ್ಲವೂ ಮುಖ್ಯವಾದಂತೆ ಶಾಂತಿಯೂ ಮುಖ್ಯ. ಯುದ್ಧದಿಂದ ಶಾಂತಿ ನಾಶವಾಗುತ್ತದೆ. ನೀವೇ ಕೈಯಾರ ಸುಖನಾಶ ಮಾಡಿಕೊಳ್ಳುವುದನ್ನು ಬಿಟ್ಟು ವಿವೇಕ ತಂದುಕೊಂಡು ಸುಖವಾಗಿರಿ. ಪ್ರಕೃತಿ ಜೀವಿಗಳಿಗೆ ವರ. ಆ ವರವನ್ನು ಸಮಾನವಾಗಿ ಹಂಚಿಕೊಂಡಾಗ ಎಲ್ಲರಿಗೂ ಸುಖಶಾಂತಿ ಸಿಗುತ್ತದೆ" ಎಂದು ಸುಖಶಾಂತಿಯ ಮಹತ್ವವನ್ನು ಬುದ್ಧನು ಬೋಧಿಸಿದನು.

(ಊ) ಸಂದರ್ಭದೊಡನೆ ವಿವರಿಸಿ.

1. "ಮನುಷ್ಯನ ರಕ್ತ ನದಿ ನೀರಿಗಿಂತಲೂ ಬೆಲೆಯುಳ್ಳದ್ದು"

ಉ. ಆಯ್ಕೆ: ಈ ಮಾತನ್ನು ಡಾ॥ ನಿರುಪಮಾ ಅವರ "ಶತಮಾನದ ಮಕ್ಕಳ ಸಾಹಿತ್ಯ" ಕೃತಿಯ "ಬುದ್ಧನ ಸಲಹೆ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವತ್ಸ ಮತ್ತು ಮಗಧ ರಾಜ್ಯರು ರಾಜರಿಗೆ ಗಂಗಾನದಿಯ ಮೇಲೆ ಸಂಪೂರ್ಣ ಅಧಿಕಾರ ಸ್ಥಾಪಿಸಲು ಯುದ್ಧಕ್ಕೆ ಸಿದ್ಧವಾಗಿ ನಿಂತರು. ಅಲ್ಲಿಗೆ ಬುದ್ಧ ಭಗವಾನ್ ಬಂದ. ನದಿಯ ನೀರು, ಮಾನವ ರಕ್ತ ಇವೆರಡರಲ್ಲಿ ಯಾವುದು

ಹೆಚ್ಚು ಬೆಲೆಯುಳ್ಳದ್ದು? ಎಂದು ಕೇಳಿದ. ಆಗ ಎರಡೂ ಕಡೆಯವರು ಮನುಷ್ಯನ ರಕ್ತ ನದಿ ನೀರಿಗಿಂತಲೂ ಬೆಲೆಯುಳ್ಳದ್ದು ಎಂದರು.

ಸ್ವಾರಸ್ಯ : ನೀರಿಗಾಗಿ ರಕ್ತ ಹರಿಸಬೇಡಿ ಎಂಬ ಸಂದೇಶ ಈ ವಾಕ್ಯದಲ್ಲಿದೆ.

2. "ನೀವು ಜೀವಿಸಬೇಕೆಂದಿದ್ದೀರಲ್ಲವೆ? ಮತ್ತೆ ಸಾಯಲೇಕೆ ಸಿದ್ಧರಾಗಿದ್ದೀರಿ?"

ಉ. ಆಯ್ಕೆ: ಈ ವಾಕ್ಯವನ್ನು ಡಾ॥ನಿರುಪಮಾ ಅವರ "ಶತಮಾನದ ಮಕ್ಕಳ ಸಾಹಿತ್ಯ" ಕೃತಿಯ "ಬುದ್ಧನ ಸಲಹೆ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವತ್ಸ ಮತ್ತು ಮಗಧ ರಾಜ್ಯಗಳವರು ಗಂಗಾ ನದಿಯ ನೀರಿಗಾಗಿ ಯುದ್ಧಕ್ಕೆ ಸಿದ್ಧರಾಗಿ ನಿಂತರು. ಅಲ್ಲಿಗೆ ಬಂದ ಬುದ್ಧ ಭಗವಾನ್ ನೀವು ಏಕೆ ಯುದ್ಧ ಮಾಡುತ್ತಿದ್ದೀರಿ ಎಂದು ಕೇಳಿದ. "ನಮ್ಮ ಜೀವಗಳಿಗೆ ಗಂಗಾನದಿಯ ನೀರು ಅವಶ್ಯ" ಆದುದರಿಂದ ಯುದ್ಧ ಮಾಡುತ್ತಿದ್ದೇವೆ ಎಂದಾಗ ಮೇಲಿನಂತೆ ಕೇಳುತ್ತಾನೆ.

ಸ್ವಾರಸ್ಯ : ಯುದ್ಧದ ಹೊರತೂ ಶಾಂತಿಗೆ ಬೇರೆ ಮಾರ್ಗಗಳಿವೆ ಎಂಬುದನ್ನು ಬುದ್ಧ ಹೇಳುತ್ತಾನೆ.

3. "ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ"

ಉ. ಆಯ್ಕೆ: ಈ ವಾಕ್ಯವನ್ನು ಡಾ॥ ನಿರುಪಮಾ ಅವರ "ಶತಮಾನದ ಮಕ್ಕಳ ಸಾಹಿತ್ಯ" ಕೃತಿಯ "ಬುದ್ಧನ ಸಲಹೆ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವತ್ಸ ಮತ್ತು ಮಗಧದ ಜನರು ಯುದ್ಧಕ್ಕೆ ಸಿದ್ಧರಾದಾಗ ಬುದ್ಧ ಭಗವಾನ್ ಬಂದು ಯುದ್ಧ ನಿಲ್ಲಿಸಲು ಉಪದೇಶ ನೀಡುತ್ತಾನೆ. ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ. ಆ ವರವನ್ನು ಸರ್ವ ಮಾನವರೂ ಸಮಾನವಾಗಿ ಹಂಚಿಕೊಂಡರೆ ಸುಖ ಶಾಂತಿ ಸಿಗುತ್ತದೆ ಎಂದು ಹೇಳುತ್ತಾನೆ.

ಸ್ವಾರಸ್ಯ : ಮನುಷ್ಯ ವಿವೇಕದಿಂದ ಬಾಳಬೇಕು ಎಂಬ ಸಂದೇಶ ಇಲ್ಲಿದೆ

(ಈ) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಮೌಲ್ಯ × ಅಪಮೌಲ್ಯ

ಸುಖ × ದುಃಖ

ವರ × ಶಾಪ

ಸತ್ಯ × ಅಸತ್ಯ

ಪವಿತ್ರ × ಅಪವಿತ್ರ

ಸ್ವಾರ್ಥ × ನಿಸ್ವಾರ್ಥ

ಉ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ಹಿಂಜರಿಕೆ : ಅಧ್ಯಾಪಕರ ಬಳಿ ಸಂಶಯವನ್ನು ಕೇಳಲು ಹಿಂಜರಿಕೆ ಇರಬಾರದು.

ವಿವೇಕ : ಎಲ್ಲರೂ ವಿವೇಕದಿಂದ ವ್ಯವಹರಿಸಬೇಕು.

ಸ್ವಾರ್ಥ : ಸ್ವಾರ್ಥ ಮನುಷ್ಯನನ್ನು ಹಾಳು ಮಾಡುತ್ತದೆ.

ಸುಖಶಾಂತಿ : ಎಲ್ಲರೂ ಸುಖಶಾಂತಿಯಿಂದ ಬಾಳಬೇಕೆಂದೇ ಬಯಸುತ್ತಾರೆ.

ಸುಭಿಕ್ಷ : ಚೆನ್ನಾಗಿ ಮಳೆಯಾದರೆ ಇಳೆ ಹಸಿರಾಗುತ್ತದೆ. ಇದರಿಂದ ದೇಶ ಸುಭಿಕ್ಷವಾಗುತ್ತದೆ.

ಸಸ್ಯಶ್ಯಾಮಲ : ಭಾರತ ದೇಶವನ್ನು ಸಸ್ಯಶ್ಯಾಮಲೆಯೆಂದು ವರ್ಣಿಸಲಾಗಿದೆ.

**IV. ಸೈದ್ಧಾಂತಿಕ ವ್ಯಾಕರಣ:**

ಕನ್ನಡ ವರ್ಣಮಾಲೆಯಲ್ಲಿ ಒಟ್ಟು 49 ಅಕ್ಷರಗಳಿವೆ. ಅವುಗಳಲ್ಲಿ ಮೂರು ಭಾಗಗಳಿವೆ.

1. ಸ್ವರಗಳು – 13
2. ಯೋಗವಾಹಗಳು – 02
3. ವ್ಯಂಜನಗಳು – 34

ಒಟ್ಟು – 49

**1. ಸ್ವರಗಳು (13) :**

ಸರಳವಾಗಿ, ಸ್ವತಂತ್ರವಾಗಿ, ಸಹಜವಾಗಿ ಉಚ್ಚರಿಸಲು ಬರುವ ಅಕ್ಷರಗಳೇ ಸ್ವರಗಳು. ಕನ್ನಡದಲ್ಲಿ ಒಟ್ಟು 13 ಸ್ವರಾಕ್ಷರಗಳಿವೆ. ಅವುಗಳನ್ನು ಈ ಕೆಳಗಿನಂತೆ ಎರಡು ಭಾಗಗಳಾಗಿ ವಿಂಗಡಿಸಿದೆ.

ಹ್ರಸ್ವಸ್ವರ (6) – ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಹ್ರಸ್ವ ಸ್ವರಗಳು ಎನ್ನುತ್ತೇವೆ.

ಉದಾ: ಅ, ಇ, ಉ, ಋ, ಎ, ಒ.

ದೀರ್ಘಸ್ವರ (7) – ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ದೀರ್ಘಸ್ವರಗಳು ಎನ್ನುತ್ತೇವೆ.

ಉದಾ: ಆ, ಈ, ಊ, ಏ, ಐ, ಓ, ಔ

**2. ಯೋಗವಾಹಗಳು (2) :**

ಸ್ವರಗಳ ಸಂಬಂಧ ಪಡೆದು ಉಚ್ಚರಿಸಲ್ಪಡುವ ಅಕ್ಷರಗಳು. ಇವು ಕನ್ನಡದಲ್ಲಿ ಎರಡು ಇವೆ.

ಉದಾ: ಂ (ಅನುಸ್ವಾರ) ಃ (ವಿಸರ್ಗ)

**3. ವ್ಯಂಜನಗಳು (34) :**

ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳೇ ವ್ಯಂಜನಗಳು. ಇವುಗಳಲ್ಲಿ ಎರಡು ಪ್ರಕಾರಗಳಿವೆ. ಅವುಗಳೆಂದರೆ,

1. ವರ್ಗೀಯ ವ್ಯಂಜನಗಳು (25)
2. ಅವರ್ಗೀಯ ವ್ಯಂಜನಗಳು (9)

**ವರ್ಗೀಯ ವ್ಯಂಜನಗಳಲ್ಲಿ ಮೂರು ವಿಭಾಗಗಳಿವೆ :**

(1) ಅಲ್ಪಪ್ರಾಣ ಅಕ್ಷರಗಳು : ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
ಕ್, ಚ್, ಟ್, ತ್, ಪ್ ಹಾಗೂ ಗ್, ಜ್, ಡ್, ದ್, ಬ್
(ಪ್ರತಿ ವರ್ಗದಲ್ಲಿ ಒಂದು ಮತ್ತು ಮೂರನೆಯ ಅಕ್ಷರಗಳು) = 10

(2) ಮಹಾಪ್ರಾಣ ಅಕ್ಷರಗಳು : ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
ಖ್, ಛ್, ಠ್, ಥ್, ಫ್ ಹಾಗೂ ಘ್, ಝ್, ಢ್, ಧ್, ಭ್
(ಪ್ರತಿ ವರ್ಗದಲ್ಲಿ ಎರಡು ಮತ್ತು ನಾಲ್ಕನೆಯ ಅಕ್ಷರಗಳು) = 10

3) ಅನುನಾಸಿಕ ಅಕ್ಷರಗಳು : ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳು
ಙ, ಞ, ಣ, ನ, ಮ
(ಪ್ರತಿ ವರ್ಗದ ಐದನೆಯ ಅಕ್ಷರಗಳು) = 05

ಅವರ್ಗೀಯ ವ್ಯಂಜನಗಳು : ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿಸಲು ಸಾಧ್ಯವಾಗದ ವ್ಯಂಜನಗಳೇ ಅವರ್ಗೀಯ ವ್ಯಂಜನಗಳು.

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = 09

✤ ✤ ✤ ✤